ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 2, September-October, 2023, Pp. 54-59.
©*IIMRD*, Mysuru

IIMRD JOURNALS

www.iimrd.com

# ಸಾಂತ್ವನ ಮಹಿಳಾ ಕೇಂದ್ರ ಮತ್ತು ಸಮಾಜ ಕಾರ್ಯ

**ಶ್ರಿಂಚನ ಎಚ್.ಎಸ್***

*ಉಪನ್ಯಾಸಕಿ, ಸಮಾಜ ಕಾರ್ಯ ವಿಭಾಗ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.

**ಸಾರಾಂಶ: (Abstract)**

*ಸ್ತ್ರೀ ಅಥವಾ ಮಹಿಳೆ ಎಂಬ ಪದವು ಸಂಸ್ಕೃತದಾಗಿದ್ದು, ಕನ್ನಡದಲ್ಲಿ ಈ ಪದಕ್ಕೆ ಹೆಣ್ಣು ಎಂಬ ಅರ್ಥವಿದೆ ಇದು ನಾಗರಿಕ ಗೌರವದ ಜೊತೆಗೆ ಪುರುಷ ಪದಕ್ಕೆ ಸಮಾನ ಪದವಾಗಿದ್ದು, ವಯಸ್ಕ ಹೆಣ್ಣನ್ನು ಸೂಚಿಸಲು ಉಪಯೋಗಿಸಲಾಗುತ್ತದೆ. ಆದಿಯಿಂದಲೂ ಸೃಷ್ಟಿಯ ಮೂಲ ಸ್ತ್ರಿ ಯಾಗಿದ್ದಾಳೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಸ್ತ್ರೀ ಗೆ ಅವಳದೇ ಆದ ಗೌರವ ಸ್ಥಾನಮಾನಗಳಿರುವುದನ್ನು ಗುರುತಿಸಬಹುದಾಗಿದೆ. ಸ್ತ್ರೀಯು ಕುಟುಂಬಕ್ಕೆ ಸಂಜೀವಿನಿಯಾಗಿದ್ದು, ಹೆಣ್ಣು ವಿಶಿಷ್ಟ ಶಕ್ತಿಗಳ ಸಂಗಮ, ಮಮತೆಯ ಮಡಿಲು ಕರುಣೆ, ವಾತ್ಸಲ್ಯ, ಅಕ್ಕರೆ, ಭೂಮಿ ತೂಕದ ತಾಳ್ಮೆಯುಳ್ಳ ಸ್ತ್ರೀ, ಸಹನಮಹಿ, ಹಾಗೂ ಭೂಮಿಗೆ ಹೋಲಿಕೆ ಮಾಡುತ್ತಾರೆ. ಹಾಗಾಗಿ ಹೆಣ್ಣನ್ನು ಒಂದು ಪ್ರಬಲ ಶಕ್ತಿ ಎನ್ನುವುದರಲ್ಲಿ ಎರಡೂ ಮಾತಿಲ್ಲ.*

**ಮುಖ್ಯಪದಗಳು(Keywords):** ಮಹಿಳಾ ದೌರ್ಜನ್ಯ, ಸಾಂತ್ವನ ಮಹಿಳಾ ಕೇಂದ್ರ, ಸಮಾಜ ಕಾರ್ಯ.

## ಪೀಠಿಕೆ

ಜಾಗತೀಕರಣದಿಂದ ಮಹಿಳೆ ಅನೇಕ ಪ್ರಯೋಜನ ಪಡೆದಿದ್ದರೂ ಶೋಷಣೆಯಿಂದ ಮುಕ್ತವಾಗಿಲ್ಲ. ಹೆಣ್ಣಿನ ಒಡಲಲ್ಲಿ ನಡೆಯುತ್ತಿರುವ ವ್ಯವಸ್ಥಿತ ಭ್ರೂಣಹತ್ಯೆಗಳು, ಅನಕ್ಷರತೆ, ಕಿರುಕುಳ, ತಾರತಮ್ಯ, ಕೌಟುಂಬಿಕ ಕಿರುಕುಳ, ಮರ್ಯಾದೆ ಹತ್ಯೆಗಳು, ಅವಮಾನ, ಅಗೌರವ, ಅತ್ಯಾಚಾರ, ಹೆಣ್ಣು ಮಕ್ಕಳ ಕಳ್ಳ ಸಾಗಾಣಿಕೆ, ಅಸಹಜ ಮರಣ, ಅಪೌಷ್ಟಿಕತೆ, ರಕ್ತಹೀನತೆ, ಕೊಲೆ, ಬಲತ್ಕಾರ, ಮಾನ ಹಾನಿ, ಪ್ರಾಣ ಹಾನಿ ಮಾಡುವುದು ಇಂತಹ ಸಮಸ್ಯೆಗಳಿಗೆ ಮಹಿಳೆಯರು ಒಳಗಾಗುತ್ತಿದ್ದಾರೆ. ಇಂತಹ ಸಮಸ್ಯೆಗಳಿಂದ ಬಳಲುತ್ತಿರುವ ಹೆಣ್ಣು ಮಕ್ಕಳ ಸಹಾಯಕ್ಕೆ ಒಳಗಾಗಿರುವ ಕೇಂದ್ರವೇ ಸಾಂತ್ವನ ಕೇಂದ್ರವಾಗಿದೆ. ಈ ಕೇಂದ್ರವು ಇತ್ತೀಚೆಗೆ ಸಖಿ ಕೇಂದ್ರವಾಗಿ ಮಾರ್ಪಡಾಗಿದೆ. ಈ ಕೇಂದ್ರವು ಒಂದೇ ಸೂರಿನಡಿ ಮಹಿಳಾ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುತ್ತದೆ. ವಿಭಿನ್ನ ರೀತಿಯ ಕೌಟುಂಬಿಕ ದೌರ್ಜನ್ಯಗಳ ಪ್ರಕರಣಗಳಲ್ಲಿ ಉಚಿತ ಕಾನೂನು ನೇರವು ನೀಡುತ್ತದೆ. ಕರ್ನಾಟಕ ರಾಜ್ಯದ ಪ್ರತಿ ಜಿಲ್ಲೆ ಮತ್ತು ತಾಲೂಕು ಮಟ್ಟದಲ್ಲಿ ಈ ಮಹಿಳಾ ಸಾಂತ್ವನ ಕೇಂದ್ರಗಳು ಕಾರ್ಯಗತವಾಗಿರುವುದನ್ನು ನೋಡಬಹುದು.

*Please cite this article as: ಶ್ರಿಂಚನ ಎಚ್.ಎಸ್.* (2023). ಸಾಂತ್ವನ ಮಹಿಳಾ ಕೇಂದ್ರ ಮತ್ತು ಸಮಾಜ ಕಾರ್ಯ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(2). ಪು.ಸಂ.* 54–59.

**ಸಾಂತ್ವನ ಕೇಂದ್ರದ ಹಿನ್ನಲೆ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಸಾಂತ್ವನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಸಾಂತ್ವನ ಮಹಿಳಾ ಸಹಾಯವಾಣಿ ಯೋಜನೆಯನ್ನು 2000–2001 ರಲ್ಲಿ ಜಾರಿಗೆ ಮಾಡಲಾಗಿದೆ. ಹಾಗಾಗಿ ಮಹಿಳಾ ದೌರ್ಜನ್ಯ, ಶೋಷಣೆ, ಅತ್ಯಾಚಾರ ಹಾಗೂ ಲೈಂಗಿಕ ಕಿರುಕುಳಕ್ಕೊಳಗಾಗಿ ಸಂಕಷ್ಟ ಪಡುತ್ತಿರುವ ಮಹಿಳೆಯರಿಗೆ 24 ಗಂಟೆಗಳ ತುರ್ತು ದೂರವಾಣಿ ಕರೆಯ ಉಚಿತ ಸೇವಾ ಸೌಲಭ್ಯ ನೀಡಲಾಗಿದೆ. ಪ್ರತಿ ಜಿಲ್ಲೆಗಳಲ್ಲಿ ಹಾಗೂ ತಾಲೂಕುಗಳಲ್ಲಿ ಒಟ್ಟು 172 ಸಾಂತ್ವನ ಕೇಂದ್ರಗಳನ್ನು ಕರ್ನಾಟಕ ರಾಜ್ಯದಲ್ಲಿ ನೋಡಬಹುದು. 1091 ಸಹಾಯವಾಣಿ ಸಂಖ್ಯೆಯಾಗಿದ್ದು, ನೊಂದ ಮಹಿಳೆಯರು ಸಹಾಯವಾಣಿ ಕೇಂದ್ರಕ್ಕೆ ದೂರವಾಣಿ ಕರೆ ಮಾಡುವುದರ ಮೂಲಕ ಪರಿಹಾರ ಮತ್ತು ಸೂಕ್ತವಾದ ರಕ್ಷಣೆಯನ್ನು ಪಡೆಯಬಹುದು.

**ರಚನೆ ಮತ್ತು ಕಾರ್ಯವಿಧಾನ**

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾಂತ್ವನ ಕೇಂದ್ರಕ್ಕೆ ಸಮಿತಿಯನ್ನು ರಚಿಸಿರುತ್ತಾರೆ. ಈ ಸಮಿತಿಯಲ್ಲಿ ಜಿಲ್ಲಾ ರಕ್ಷಣಾಧಿಕಾರಿಗಳು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು, ಬಾರ್ ಆಸೋಸಿಯೇಷನ್ ಅಧ್ಯಕ್ಷರು ಮತ್ತು ಇತರರು ಸದಸ್ಯರಿರುತ್ತಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಸಮಿತಿಯ ಕಾರ್ಯದರ್ಶಿಗಳಾಗಿರುತ್ತಾರೆ. ಜಿಲ್ಲಾ ರಕ್ಷಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಾಂತ್ವನ ಮಹಿಳಾ ಸಹಾಯವಾಣಿಯ ಸಭೆಯನ್ನು ನಡೆಸುವುದರ ಜೊತೆಗೆ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುತ್ತಾರೆ. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾ ಅಧಿಕಾರಿಗಳು ಪ್ರತಿ 3 ತಿಂಗಳಿಗೊಮ್ಮೆ ಪ್ರಗತಿ ಪರಿಶೀನಾ ಸಭೆಯನ್ನು ನಡೆಸಿ ಹೆಚ್ಚಿನ ಮಾರ್ಗದರ್ಶನವನ್ನು ಮಾಡುತ್ತಾರೆ.

**ರಚನೆ**

ಸಾಂತ್ವನ ಮಹಿಳಾ ಸಹಾಯವಾಣಿ ಸಮಿತಿ ಸದಸ್ಯರ ಆಡಳಿತ ರಚನೆಯು ಕ್ರಮಬದ್ದವಾಗಿ ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಸದಸ್ಯರು, ಆಪ್ತ ಸಮಾಲೋಚಕರು ಹಾಗೂ ಸಮಾಜ ಕಾರ್ಯಕರ್ತರು ಇರುತ್ತಾರೆ. ಪ್ರತಿಯೊಂದು ಹಂತದಲ್ಲಿಯೂ ಮೇಲ್ ಅಧಿಕಾರಿಗಳಿದ್ದು, ಅವರಡಿಯಲ್ಲಿ ಇತರೆ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಾರೆ.

**ಸಾಂತ್ವನ ಮಹಿಳಾ ಸಹಾಯವಾಣಿಯ ಉದ್ದೇಶ**

ಕುಟುಂಬಗಳ ಹೊಂದಾಣಿಕೆಯಲ್ಲಿನ ಸಮಸ್ಯೆಗಳನ್ನು ಪರಿಹರಿಸಲು ಎಲ್ಲ ರೀತಿಯ ಪ್ರಯತ್ನ ಮಾಡಲಾಗುವುದು. ದುಶ್ಚಟಗಳಾದ ಮದ್ಯಪಾನ, ಮಾದಕ ವಸ್ತುಗಳ ಸೇವನೆ, ಜೂಜು, ಅತಿಯಾದ ಲೈಂಗಿಕ ದುವರ್ತನೆಗಳು, ತಂಬಾಕು, ಗುಟ್ಕಗಳ ಸೇವನೆಯಿಂದ ಅದ ಪರಿಣಾಮಗಳನ್ನು ತೊಂದರೆಗೊಳಗಾಗಿರುವ ಸಮಸ್ಯೆಗಳನ್ನು ನಿವಾರಿಸಲು ಪ್ರಯತ್ನಿಸಲಾಗುವುದು. ಹಾಗೆಯೆ ಸಾಮಾಜಿಕ ಪಿಡುಗಳಾದ ವರದಕ್ಷಿಣೆ ಕಿರುಕುಳ, ಬಾಲ್ಯ ವಿವಾಹ, ಸತಿ ಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆ, ಹಾಗೂ

ಅತ್ಯಾಚಾರ, ಲೈಂಗಿಕ ಬಲತ್ಕಾರ, ವಿವಾಹ ಪೂರ್ವತಾಯಿಂದರಿಗೆ ಉಚಿತ ಕಾನೂನು ಸಲಹೆಗಳು ಮತ್ತು ಪುನರ್–ವಸತಿಗಳನ್ನು ಒದಗಿಸಲಾಗುತ್ತದೆ.

ದಾಂಪತ್ಯ ಜೀವನದಲ್ಲಿ ಕಂಡುಬರುವ ಗಂಡ ಹೆಂಡತಿಯರ ಜಗಳ, ಅತ್ತೆ, ಸೊಸೆಯರ ಜಗಳ, ಲೈಂಗಿಕ ಆಸಕ್ತಿಯ ಕೊರತೆ, ಮನಸ್ತಾಪ, ಮುಂಗೋಪ, ಹಣಕಾಸಿನ ಕೊರತೆ ಈ ರೀತಿಯ ವೈಮನಸ್ಸುಗಳನ್ನು ನಿವಾರಿಸಿ ಸುಖಕರ ಜೀವನಕ್ಕೆ ಪ್ರರೇಪಿಸಲಾಗುವುದು. ವಿಧವೆ, ಪರಿತ್ಯಾಗಿಗಳು, ಅಂಗವಿಕಲರು, ಅವಲಂಬಿತರು, ವೃದ್ಧರು, ಗಂಭೀರ ಕಾಯಿಲೆಗಳನ್ನು ಹೊಂದಿರುವ ರೋಗಿಗಳು, ನಿರಾಶ್ರಿತರು, ಅನಾಥ ಮಹಿಳೆಯರಿಗೆ ಸರ್ಕಾರದಿಂದ ದೊರಕುವ ವಿವಿಧ ಇಲಾಖೆಗಳ ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳ ಬಗ್ಗೆ ತಿಳಿಸಲಾಗುವುದು. ನಮ್ಮ ಸಮಾಜದಲ್ಲಿನ ವಿವಿಧ ರೀತಿಯ ಶೋಷಣೆಗಳನ್ನು ತಡೆಗಟ್ಟಲು ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

**ಮಹಿಳಾ ಸಮಸ್ಯೆಯ ವಿಧಗಳು**

ಮಹಿಳಾ ದೌರ್ಜನ್ಯ ಎಂದರೆ ಮಹಿಳೆಯರಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡುವುದಾಗಿದ್ದು, ಪ್ರಮುಖವಾಗಿ ಮಹಿಳೆಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಮಹಿಳೆಯನ್ನು ಹರಿತವಾದ ಮತ್ತು ಬಲವಾದ ವಸ್ತುಗಳನ್ನು ಬಳಸಿ ಮಹಿಳೆಯರ ಮೇಲೆ ಹಲ್ಲೆ ಮಾಡುವುದು, ಲೈಂಗಿಕ ಕಿರುಕುಳ, ಅತ್ಯಾಚಾರ, ಕೌಟುಂಬಿಕ ಹಿಂಸೆ, ಹೆಣ್ಣಿನ ಶೀಲದ ಬಗ್ಗೆ ಸಂಶಯ, ಲೈಂಗಿಕವಾಗಿ ಹೆಣ್ಣಿನ ಇಚ್ಚೆಗೆ ವಿರುದ್ಧವಾಗಿ ಬಲತ್ಕಾರ ಮಾಡುವುದು. ವರದಕ್ಷಿಣೆ ಕಿರುಕುಳ, ಸತಿಸಹಗಮನ ಪದ್ಧತಿ, ದೇವಾದಾಸಿ ಪದ್ಧತಿ, ಬಾಲ್ಯವಿವಾಹ ಪದ್ಧತಿ, ಆಹಾರ ಸೇವನೆಯಲ್ಲಿ ತಾರತಮ್ಯತೆ, ವೇತನದಲ್ಲಿ ಅಸಮಾನತೆ, ವೇಶ್ಯಾವಾಟಿಕೆ, ಹೆಣ್ಣು ಮಕ್ಕಳ ದಂಧೆಯನ್ನು ಮಾಡುವುದು, ಮರ್ಯಾದೆ ಹತ್ಯೆಗಳು, ಆಸಿಡ್ ದಾಳಿ, ಹೆಣ್ಣಿನ ದೇಹದ ಅಂಗಾಗಳನ್ನು ವಿರೂಪಗೊಳಿಸುವುದು, ಆಸ್ತಿ ಹಂಚಿಕೆಯಲ್ಲಿ ಅಸಮಾನತೆ ಇನ್ನು ಹತ್ತು ಹಲವಾರು ಮಹಿಳಾ ಸಮಸ್ಯೆಯ ರೂಪಗಳನ್ನು ನೋಡಬಹುದು. ಇಂತಹ ಹೆಣ್ಣು ಮಕ್ಕಳ ಸಮಸ್ಯೆಗಳನ್ನು ಹೋಗಲಾಡಿಸಿ ಮಹಿಳೆಯರಿಗೆ ಸೂಕ್ತ ರಕ್ಷಣೆಯನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವನ್ನು ಸಾಂತ್ವನ ಕೇಂದ್ರ ಮಾಡುತ್ತದೆ.

**ಸಾಂತ್ವನದ ಪರಿಹಾರ ಕ್ರಮಗಳು**

ಮಹಿಳೆಯರಿಗೆ ಕಾನೂನು ನೆರವು ತಾತ್ಕಾಲಿಕ ಆಶ್ರಯ, ಆರ್ಥಿಕ ಪರಿಹಾರ ಹಾಗೂ ತರಬೇತಿ ನೀಡಿ ಸ್ವಾವಲಂಬಿಗಳಾಗುವಂತೆ ಮಾಡಿ ಸ್ವತಂತ್ರ್ಯ ಬದುಕು ಸಾಗಿಸಲು ನೆರವಾಗುವುದರ ಜೊತೆಗೆ, ಅವರನ್ನು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಬಲೀಕರಣ ಹೊಂದುವಂತೆ ಮಾಡುವುದು. ಸಾಂತ್ವನ ಕೇಂದ್ರಗಳನ್ನು ಸ್ವಯಂಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಪ್ರತಿಯೊಂದು ಕೇಂದ್ರದಲ್ಲಿ ಶುಲ್ಕ ರಹಿತ ದೂರು ನೋಂದಣಿ ಮಾಡಲಾಗುತ್ತದೆ. ಮಹಿಳಾ ಸಹಾಯವಾಣಿಯ ದಿನದ 24 ಗಂಟೆಗಳು ಸಂಕಷ್ಟಕ್ಕೊಳಗಾದ ಮಹಿಳೆಯರಿಂದ ಕರೆಗಳನ್ನು ಸ್ವೀಕರಿಸುತ್ತವೆ. ತೊಂದರೆಗೆ ಸಿಲುಕಿದ ಮಹಿಳೆಯರಿಗೆ ಜಿಲ್ಲಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಅವಶ್ಯಕವಾದ ಸೌಲಭ್ಯ ಹಾಗೂ ಪುರ್ನವಸತಿ ಸೇವೆಗಳನ್ನು ಪ್ರತಿ ಪ್ರಕರಣದ ಅರ್ಹತೆಗನುಗುಣವಾಗಿ ನೀಡಲಾಗುತ್ತದೆ. ಜೊತೆಗೆ ದೌರ್ಜನ್ಯಕ್ಕೊಳಗಾದ ಮಹಿಳೆಗೆ ತಕ್ಷಣ ಆರ್ಥಿಕ ನೆರವು ಅವಶ್ಯಕತೆ ಇದ್ದಲ್ಲಿ 2000 ರೂಪಾಯಿಂದ ಗರಿಷ್ಟ 10,000 ರೂಪಾಯಿಗಳವರೆಗೆ ನೆರವು ನೀಡಲಾಗುತ್ತದೆ. ಹಾಗೂ ಮಹಿಳಾ ಆಪ್ತ ಸಮಾಲೋಚನೆ, ಮಾರ್ಗದರ್ಶನ,

ಪೋಲೀಸ್ ನೆರವು ಹಾಗೂ ಸೂಕ್ತ ರಕ್ಷಣೆ, ಉಚಿತ ಕಾನೂನು ಸಲಹೆಗಳನ್ನು ನೀಡುವುದರ ಜೊತೆಗೆ ಮಹಿಳೆಯರ ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ.

**ಉಚಿತ ಕಾನೂನಿನ ನೆರವು**

ಸಂವಿಧಾನದ 15(3) ನೇ ವಿಧಿಯ ಪ್ರಕಾರ ಮಹಿಳೆಯರಿಗೆ ವಿಶಿಷ್ಟ ಆದ್ಯತೆಯನ್ನು ಕಲ್ಪಿಸಿಕೊಡುತ್ತದೆ. 2005 ಮತ್ತು 2008ರ ಜಾರಿಗೆ ಬಂದ ಮಹಿಳೆಯ ಮೇಲಿನ ಕೌಟುಂಬಿಕ ದೌರ್ಜನ್ಯ ತಡೆಯುವಲ್ಲಿ ಕಾಯ್ದೆಯನ್ನು ರೂಪಿಸಲಾಗಿದೆ. 23ನೇಯ ವಿಧಿಯ ಅಡಿಯಲ್ಲಿ ಮಹಿಳೆಯರ ಮೇಲೆ ಶೋಷಣೆ ಹಾಗೂ ಲೈಂಗಿಕ ದೌರ್ಜನ್ಯ ನಡೆಸುವುದನ್ನು ತಡೆಯಲಾಗಿದೆ.

1961 ರಲ್ಲಿ ಬಂದ ವರದಕ್ಷಿಣೆ ನಿಷೇಧ ಕಾಯ್ದೆ, 1956ರ ಹಿಂದೂ ವಿವಾಹ ಕಾಯ್ದೆ, ಉತ್ತಾರಾಧಿಕಾರ ಕಾಯ್ದೆ 2005ರಲ್ಲಿ ಬಂದ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, 1994ರ ಸ್ತ್ರೀ ಭ್ರೂಣ ಹತ್ಯೆ ಕಾಯ್ದೆ, 2006ರ ಬಾಲ್ಯ ವಿವಾಹ ನಿಷೇಧ ಕಾಯ್ದೆ, 2005ರಲ್ಲಿ ತಿದ್ದುಪಡಿಯಾದ ಹಿಂದೂವಾರಸುದಾರಿಕೆ ಕಾಯ್ದೆ (ಹೆಣ್ಣು ಮಕ್ಕಳಿಗೆ ಆಸ್ತಿ ಹಕ್ಕು) ಇವುಗಳನೆಲ್ಲಾ ಮಹಿಳೆಯರು ಯಥವತ್ತಾಗಿ ಬಳಸಿಕೊಳ್ಳುತ್ತಾ ಬಂದಿದ್ದರೆ, ಎಷ್ಟೋ ಮಂದಿ ಗಂಡಸರು ಜೈಲು ಪಾಲಾಗಬೇಕಾಗಿತ್ತು ಆದರೆ ಎಲ್ಲರೂ ಸಹ ತಾನೂ, ತನ್ನ ಕುಟುಂಬ ಎಂದು ಸಂರಕ್ಷಣೆಯನ್ನಷ್ಟೆ ನೋಡುತ್ತಾರೆಯೇ ಹೊರೆತು ಒಂದೇ ಬಾರಿಗೆ ಕಾನೂನಿನ ಮೆಟ್ಟಿಲು ತುಳಿಯುವುದಿಲ್ಲ ಇವುಗಳೆಲ್ಲವು ಹೆಣ್ಣು ಮಕ್ಕಳಿಗೆ ಬರುವಂತಹ ಕಾನೂನಿನ ನೆರುವು ಆಗುತ್ತದೆ.

**ಮಹಿಳಾ ಪ್ರತಿಕ್ರಿಯೆಗಳ ಬಗ್ಗೆ ಅವಲೋಕನ**

ಲೈಂಗಿಕ ಶೋಷಣೆಗಳು ನಡೆದಾಗ ಕೆಲವು ಮಹಿಳೆಯರು ಇವುಗಳ ವಿರುದ್ಧ ಪ್ರತಿಭಟಿಸಿದರೆ, ಕೆಲವು ಮಹಿಳೆಯರು ಮರ್ಯಾದಗೆ ಅಂಜಿ ಸಹಿಸಿಕೊಳ್ಳುತ್ತಿದಾರೆ.

- ಸಂಬಂಧಿಕರಿಂದ ಅಥವಾ ನೆರೆಹೊರೆಯವರ ಬೆದರಿಕೆಗೆ ಹೆದರಿ ಸಮಸ್ಯೆಯ ನೈಜತೆಯನ್ನು ಮರೆಮಾಚುವುದು.
- ಲೈಂಗಿಕ ಕಿರುಕುಳವನ್ನು ತಡೆಯಲು ಯಾವುದೇ ಅಸ್ತ್ರವನ್ನು ಜಾರಿಗೆ ತಂದರೂ ಅದನ್ನು ತಡೆಯಲು ಸಾಧ್ಯವಾಗದಿರುವ ಪರಿಸ್ಥಿತಿ.
- ಪರಸ್ಪರ ಅನುಮಾನಗಳ ಹಿನ್ನಲೆಯಲ್ಲಿ ಗಂಡು–ಹೆಣ್ಣು ಇಬ್ಬರು ಪರಸ್ಪರ ಮತ್ತು ಇತರರೊಂದಿಗೆ ಘರ್ಷಣೆಗೆ ಮಿತಿಮೀರಿದ ಸಂದರ್ಭಗಳಲ್ಲಿ ಸಾಂತ್ವನದ ಮೂಲಕ ತನ್ನ ಕಾನೂನಾತ್ಮಕ ಕಾರ್ಯಗಳನ್ನು ಕೈಗೊಳ್ಳುತ್ತಾರೆ.

**ಸಲಹೆಗಳು**

- ಸಾಂತ್ವನದಂತಹ ಸಂಸ್ಥೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಬೇಕು.
- ಬಡವರಿಗೆ ಯಾವುದೇ ರೀತಿಯ ಆರ್ಥಿಕ ಒತ್ತಡಗಳನ್ನು ನೀಡದೆ ಉಚಿತವಾಗಿ ವಕೀಲರನ್ನು ನೇಮಿಸಬೇಕು.

- ಈ ಸಂಸ್ಥೆಯ ಬಗ್ಗೆ ಗ್ರಾಮೀಣ ಪ್ರದೇಶ ಮತ್ತು ಸಮುದಾಯಗಳಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು.
- ಮಹಿಳಾ ಕಾರ್ಯಕರ್ತರಿಗೆ ಕಛೇರಿಯಲ್ಲಿನ ನಿರ್ವಾಹಣಾ ಅಧಿಕಾರಿಗಳಿಗೆ ಆಪ್ತಸಮಾಲೋಚಕರಿಗೆ ರಕ್ಷಣೆಯನ್ನು ನೀಡಬೇಕು.
- ಕಛೇರಿಗಳಲ್ಲಿ ನಿರಂತರವಾಗಿ ಪೋಲೀಸ್ ಕಾವಲಿನ ವ್ಯವಸ್ಥೆ ಇರಬೇಕು.
- ಅನಾರೋಗ್ಯ ಸಂದರ್ಭದಲ್ಲಿ ಸಂಕಷ್ಟ ಮಹಿಳೆಯರಿಗೆ ಸೂಕ್ತ ವೈದ್ಯಕೀಯ ಸೌಲಭ್ಯಗಳು ಉಚಿತವಾಗಿ ದೊರೆಯಬೇಕು.

**ಉಪಸಂಹಾರ**

ಒಟ್ಟಾರೆಯಾಗಿ ಇಂತಹ ಸಾಂತ್ವನ ಕೇಂದ್ರಗಳು ಪ್ರತಿಯೊಬ್ಬ ಮಹಿಳೆಯರಿಗೆ ತುಂಬಾ ಅವಶ್ಯಕವಾಗಿರುವುದರಿಂದ ಇದರ ಜಾಗೃತಿ ಅತಿ ಹೆಚ್ಚಾಗಿ ಪ್ರತಿ ಹಳ್ಳಿಗಳಿಗೂ ನಗರ ಪ್ರದೇಶಗಳಿಗೂ ಮಹಿಳಾ ಸಂಘಟನೆಗಳಿಗೂ ಬೇಕಾಗಿರುತ್ತದೆ. ಕಾನೂನಿನ ನೆರವು ಮಹಿಳೆಯರಿಗೆ ಇದ್ದರೂ ಕಾನೂನಿನ ನೆರವು ತೆಗೆದುಕೊಳ್ಳಲು ಅಂಜುತ್ತಾರೆ. ಅಂತಹ ಸಮಯದಲ್ಲಿ ಹೆಣ್ಣು ಮಕ್ಕಳಿಗೆ ಸಾಂತ್ವನ ರಕ್ಷಣೆಯನ್ನು ನೀಡುತ್ತದೆ. ನೊಂದ ಮಹಿಳೆಯರಿಗೆ ಈ ಸಾಂತ್ವನ ತುಂಬಾ ಅವಶ್ಯಕವಾಗಿದ್ದು, ಇದರಲ್ಲಿ ಸಂಪೂರ್ಣ ಸಹಾಯದ ನೆರವು ಇರುವುದರಿಂದ ಸಹಾಯ ಹಸ್ತ ಕೇಳಬಹುದು ನೊಂದ ಮಹಿಳೆಯರಿಗೆ ಆಪ್ತ ಸಮಾಲೋಚನೆ ಮಾಡುವುದರ ಮೂಲಕ ಧೈರ್ಯ, ಸ್ಥೈರ್ಯ, ವೃತ್ತಿ ಕೌಶಲ್ಯ, ನಾಯಕತ್ವ ಗುಣ, ಹೊಂದಾಣಿಕೆಯ ಮನೋಭಾವನೆಯ ಜೊತೆಗೆ ತಾತ್ಕಾಲಿಕ ಆಶ್ರಯ, ತರಬೇತಿ ನೀಡಿ ಸ್ವಾವಲಂಬಿಗಳಾಗುವಂತೆ ಮಾಡಿ ಸ್ವತಂತ್ರ ಬದುಕು ಸಾಗಿಸಲು ನೆರವಾಗುವುದರ ಜೊತೆಗೆ ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಶಕ್ತರನ್ನಾಗಿಸುವ ಗುರಿಯನ್ನು ಬೆಳಸಿಕೊಡುತ್ತದೆ. ನೊಂದ ಮಹಿಳೆಯರಿಗೆ ಈ ಸಾಂತ್ವನ ಕೇಂದ್ರ ಒಳ್ಳೆಯ ಅವಕಾಶವನ್ನು ಕಲ್ಪಿಸಿಕೊಡುತ್ತದೆ. ಹಾಗೂ ನೊಂದ ಮಹಿಳೆಯರ ಮನೆಗೆ ಭೇಟಿ ಕೊಡುವುದರ ಮೂಲಕ ಅವರಿಗೆ ರಕ್ಷಣೆಯನ್ನು ಕಲ್ಪಿಸಿಕೊಡುತ್ತದೆ.

**ಪರಾಮರ್ಶನ ಗ್ರಂಥಗಳು**


- ಅನುಪಮಾ, ಎಚ್.ಎಸ್. (2016). *ಮಹಳೆ.* ಲಡಾಯಿ ಪ್ರಕಾಶನ. ಬೆಂಗಳೂರು.
- ಅಶೋಕನ್ ಆರ್. ಲೋಕನಾಥನ್ ಪಿ. ಭಾರತದಲ್ಲಿ ಮಹಿಳಾ ಸಬಲೀಕರಣ.
- ಆರಾಧನಾ ಶುಕ್ಲಾ. ಭಾರತದಲ್ಲಿ ಸಮಕಾಲೀನ ಸಾಮಾಜಿಕ ಸಮಸ್ಯೆಗಳು.
- ಇಂದಿರಾ, ಆರ್. *ಮಹಿಳೆ ಸಮಾಜ ಮತ್ತು ಸಂಸ್ಕೃತಿ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಗೇಲ್‌ಯುಕೋಕಿಸ್. ಹೊಸಪೀಳಿಗೆಗೆ ಮಹಿಳಾ ಸಮಸ್ಯೆಗಳ ಸಾಮಾಜಕಾರ್ಯದ ದೃಷ್ಟಿಕೋನ.
- ಮೂರ್ತಿಶ್ವರಯ್ಯ, ಜಿ.ಕಾ. (2002). *ಮಹಿಳೆ ಸಮಾಜ ಮತ್ತು ಕಾನೂನು.* ಸಪ್ನ ಬುಕ್‌ಹೌಸ್. ಬೆಂಗಳೂರು.

- ನೇಮಿಚಂದ್ರ. (2011). *ಮಹಿಳಾ ಅಧ್ಯಯನ.* ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
- ರಾಚೆಲ್‌ಕಾನ್–ಹಟ್. ಮಹಿಳೆಯರ ಸಮಸ್ಯೆಗಳು ಮತ್ತು ದೃಷ್ಟಿಕೋನ.
- ಶಂಕರ್‌ರಾವ್, ಚ.ನ. (1999). ಭಾರತದ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಘಟನೆ. ಜೈ ಭಾರತ್ ಪ್ರಕಾಶನ. ಮಂಗಳೂರು.
- Gelles R.J. (1974). *The Violent Home: A study of physical aggression between husbands and wives.* Sage Publication, Beverity Hills.